CC

ಬೇಲೂರಿನ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 406/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಅಶೋಕ | P.W | 2 |
| ತಂದೆಯ ಹೆಸರು | ತೋಟಪ್ಪ | C.W | 3 |
| ವಯಸ್ಸು | 30 ವರ್ಷ | | |
| ಉದ್ಯೋಗ | ವ್ಯವಹಾರ | ಪ್ರ.ವ.ಬೋ | |
| ವಾಸಸ್ಥಳ | ನಿಡಗೋಡು | ದಿನಾಂಕಃ 23.05.2023 | |

**ಮುಖ್ಯ ವಿಚಾರಣೆಃ-  ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಘಟನೆಯನ್ನು ಕಣ್ಣಾರೆ ನೋಡಿರುತ್ತೇನೆ ಎಂದು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಈಗ ಪೋಟೊದಲ್ಲಿ ತೋರಿಸಿರುವ ವಾಹನವನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ಸದರಿ ವಾಹನದ ಕೀ ಯನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ಆರೋಪಿತರನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ಈಗ ತೋರಿಸಿರುವ ದಾಖಲಾತಿಗಳಲ್ಲಿ ನನ್ನ ಸಹಿ ಇರುತ್ತದೆ. ಸದರಿ ಮಹಜರುಗಳನ್ನು ಅನುಕ್ರಮವಾಗಿ ನಿಪಿ 2 ಮತ್ತು 3 ಎಂದು , ಸಾಕ್ಷಿಯ ಸಹಿಗಳನ್ನು ಅನುಕ್ರಮವಾಗಿ ನಿಪಿ 2 ಎ ಮತ್ತು ನಿಪಿ 3 ಎ ಎಂದು ಗುರುತಿಸಲಾಯಿತು. ನಿಪಿ 2 ಮತ್ತು ನಿಪಿ 3 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 2 ಮತ್ತು 3 ಕ್ಕೆ 2022 ನೇ ಸಾಲಿನಲ್ಲಿ ಬೇಲೂರು ಠಾಣೆಯ ಬಳಿ ಸಹಿ ಮಾಡಿರುತ್ತೇನೆ.

ನನ್ನ ಸಮಕ್ಷಮ ಪೊಲೀಸರು ಮಹಜರು ಕ್ರಮ ಜರುಗಿಸಿ ಏನನ್ನೂ ಅಮಾನತ್ತು ಪಡಿಕೊಂಡಿಲ್ಲ.

**ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ**

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ 01-03-2022 ರಂದು ಚಾಸಾ-12 ರವರು ಚಾಸಾ 1 ರವರು ತೋರಿಸಿದಂತೆ ಸ್ದಳದಲ್ಲಿ ನನ್ನ , ಚಾಸಾ-7 ರವರ ಸಮಕ್ಷಮ ನಿಪಿ 2 ರಂತೆ ಮಹಜರು ಕ್ರಮ ಜರುಗಿಸಿ ಬೆಳಗ್ಗೆ 10 ರಿಂದ 10-45 ರ ಸಮಯದಲ್ಲಿ ಜರುಗಿಸಿ ಸದರಿ ಮಹಜರಿಗೆ ಸ್ದಳದಲ್ಲೇ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿಃ 01-03-2022 ರಂದು ಚಾಸಾ-12 ರವರು ಬೇಲೂರು ಪೊಲೀಸ್ ಠಾಣಾ ಆವರಣದಲ್ಲಿ ನಾನು ತಂದು ಹಾಜರುಪಡಿಸಿದ ವಾಹನವನ್ನು ನನ್ನ , ಚಾಸಾ-6 ರವರ ಸಮಕ್ಷಮ ನಿಪಿ 3 ರಂತೆ ಅಮಾನತ್ತು ಮಹಜರು ಕ್ರಮ ಜರುಗಿಸಿ ಬೆಳಗ್ಗೆ 11-30 ರಿಂದ 12-00 ರ ಸಮಯದಲ್ಲಿ ಜರುಗಿಸಿ ಸದರಿ ತುಫಾನ್ ವಾಹನವನ್ನು ಮತ್ತು ಒಂದು ಕೀ ಯನ್ನು ಅಮಾನತ್ತುಪಡಿಸಿಕೊಂಡು ಸದರಿ ಮಹಜರಿಗೆ ಸ್ದಳದಲ್ಲೇ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿಃ 01-03-2022 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿ ನನ್ನ ಹೇಳಿಕೆಯಲ್ಲಿ ದಿಃ 28-02-2022 ರಂದು .......... ನೋಡಿದರೆ ಗುರುತಿಸುತ್ತೇನೆ ಎಂದು ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆ ಅಂಶವನ್ನು ನಿರಾಕರಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ನಿಪಿ-4 ರಂತೆ

ಹೇಳಿಕೆ ನೀಡಿದ್ದರೂ ಕೂಡ ಮತ್ತು ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಿಂದಃ ಇಲ್ಲ**

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ <u>ಹೇ ಕೇ ಸ ಇ ಒ</u>

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು